**<u>ದಿನಾಂಕಃ 27.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ.ಸಿ.ಎಲ್.ಎಸ್. ವಕೀಲರಿಂದಃ-</u>

1) ನಮ್ಮ ಮುತ್ತಾತ ಮರಿಕೆಂಪಯ್ಯನ ಸಿದ್ದಯ್ಯನ ಹೆಂಡತಿ ದೊಡ್ಡ ಹನುಮಮ್ಮ ಎಂದರೆ ಸರಿ. ಸದರಿ ದೊಡ್ಡ ಹನುಮಮ್ಮ ಪೌಳಿ ದೊಡ್ಡಿ ಗ್ರಾಮದ ವಾಸಿ ಎಂದರೆ ಗೊತ್ತಿಲ್ಲ. ದೊಡ್ಡ ಹನುಮಮ್ಮ ರವರ ತಂದೆ ಮುದ್ದಯ್ಯ ರವರು ಪೌಳಿ ದೊಡ್ಡಿ ಗ್ರಾಮದಲ್ಲಿ ನೀರಗಂಟಿ ಹಾಗೂ ತೋಟಿಗರ ಕೆಲಸ ಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಆದರೆ ಅವರು ಪೌಳಿ ದೊಡ್ಡಿ ಗ್ರಾಮದಲ್ಲಿ ವಾಸವಾಗಿದ್ದರು. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮುದ್ದಯ್ಯನ ತಂದೆ ಹೆಸರು ಹನುಮ ಎಂದರೆ ಗೊತ್ತಿಲ್ಲ. ಸದರಿ ಮುದ್ದಯ್ಯನವರಿಗೆ ಹನುಮ ಎಂಬ ಒಬ್ಬ ಸಹೋದರ ಇದ್ದ ಎಂದರೆ ಗೊತ್ತಿಲ್ಲ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹನುಮ ಎಂಬುವವರಿಗೆ ಹನುಮಮ್ಮ ಎಂಬ ಒಬ್ಬ ಮಗಳು ಇದ್ದಳು ಎಂದರೆ ಸರಿಯಲ್ಲ. ಸದರಿ ಮುದ್ದಯ್ಯನವರಿಗೆ ಗಂಡು ಮಕ್ಕಳು ಇಲ್ಲ ಎಂದರೆ ಸರಿ. ಸದರಿ ಮುದ್ದಯ್ಯನ ಅಣ್ಣ ಹನುಮನವರಿಗೆ ಕಾಡಮ್ಮ ಎಂಬ ಒಬ್ಬಳೇ ಮಗಳು ಎಂದರೆ ಸರಿಯಲ್ಲ. ಸದರಿ ಕಾಡಮ್ಮನನ್ನು ಹಾಲಯ್ಯ ಎಂಬುವವರಿಗೆ ಕೊಟ್ಟು ವಿವಾಹ ಮಾಡಲಾಯಿತು ಎಂದರೆ ಗೊತ್ತಿಲ್ಲ.

2) ಸದರಿ ಹನುಮಯ್ಯ ರವರು ತನ್ನ ಅಳಿಯ ಹಾಲಯ್ಯ ನನ್ನು ದತ್ತಕ ತೆಗೆದುಕೊಂಡು ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹನುಮಯ್ಯ ರವರನ್ನು ಮುದ್ದಯ್ಯ ರವರು ಸಾಕಿಕೊಂಡಿದ್ದರು ಎಂದರೆ ಸಾಕ್ಷಿ ನಮ್ಮ ಮುತ್ತಾತ ಮರಿಮುದ್ದ ಕೆಂಪಯ್ಯನವರು ಸಾಕಿಕೊಂಡಿದ್ದರು ಎಂದು ನುಡಿಯುತ್ತಾರೆ.

3) ದಾವಾ ಸ್ವತ್ತಿನ 1976-77 ಮತ್ತು 1978-79 ನೇ ಸಾಲಿನ ಪಹಣಿಪತ್ರಿಕೆಗಳಲ್ಲಿ ಹಾಲಯ್ಯ ಮತ್ತು 1 ನೇ ಪ್ರತಿವಾದಿ ಹನುಮಯ್ಯ ರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸಾಕ್ಷಿ ಅವರೇ ಮಾಡಿಕೊಂಡಿರುವುದು ಎಂದು ನುಡಿಯುತ್ತಾರೆ. 1980-81 ರಿಂದ 1983-84 ರವರೆಗು ಹನುಮಯ್ಯನವರ ಹೆಸರು ತೆಗದುಹಾಕಿ ಹಾಲಯ್ಯ ನವರ ಹೆಸರಿನಲ್ಲಿ

ಪಹಣಿಪತ್ರಿಕೆಗಳು ಬರುತ್ತಿತ್ತು ಎಂದರೆ ಆ ಬಗ್ಗೆ ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಹಾಲಯ್ಯ ನವರು ಅವರ ಹೆಸರಿಗೆ ಪಹಣಿಪತ್ರಿಕೆಗಳನ್ನು ಮಾಡಿಸಿಕೊಂಡ ನಂತರ ವೆಂಕಟಗಿರಿ ಗೌಡ ಮತ್ತು ಬಸವೇಗೌಡ ನ ಮಗ ಜವರೇಗೌಡ ರವರಿಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಲಾಯಿತು ಎಂದರೆ ಗೊತ್ತಿಲ್ಲ. ಹೆಚ್.ಓ.ಎ.ಸಿ.ಆರ್. 48/79-80 ರಂತೆ ತಹಶೀಲ್ದಾರ್ ರವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿ ಕರ್ನಾಟಕ ಗ್ರಾಮದ ಅನುವಂಶಿಕ ಕಾರ್ಯಾಲಯಗಳ ರದ್ದತಿ ತಿದ್ದುಪಡಿ ಕಾಯಿದೆ 1976 ವಿಧಿ 5/3 ರ ಅನ್ವಯ ಮತ್ತು ವಿಧಿ 4/3 ರ ಅನ್ವಯ ಸದರಿ ಸ್ವತ್ತುಗಳನ್ನು ಸರ್ಕಾರ ವಶಕ್ಕೆ ಪಡೆದುಕೊಂಡಿದೆ ಎಂದರೆ ಗೊತ್ತಿಲ್ಲ.

4) ಹನುಮಯ್ಯ ರವರು ಹೆಚ್.ಓ.ಎ.ಸಿ.ಆರ್. 145/84-85 ಮತ್ತು ಹೆಚ್.ಓ.ಎ.ಆರ್. 2/84-85 ರಂತೆ ಸದರಿ ದಾವಾ ಸ್ವತ್ತುಗಳಲ್ಲಿ ನನಗೆ ಅರ್ಧ ಭಾಗ ಬರಬೇಕು ಎಂದು ತಹಶೀಲ್ದಾರ್ ರವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅರ್ಜಿಗಳ ಆಧಾರದ ಮೇಲೆ ತಹಶೀಲ್ದಾರ್ ರವರು ಸ್ಥಳ ಪರಿಶೀಲನೆಮಾಡಿ ಆರ್.ಐ ವರದಿ ಆಧಾರದ ಮೇಲೆ ನೀರಗಂಟಿ ಹಾಗೂ ತೋಟಿಗರ ಕೆಲಸವನ್ನು ಹನುಮಯ್ಯ (1 ನೇಪ್ರತಿವಾದಿ) ಮತ್ತು ಹಾಲಯ್ಯ ರವರು ಮಾಡುತ್ತಿದ್ದರು ಎಂಬ ವರದಿಯ ಮೇಲೆ ಇಬ್ಬರಿಗೂ ಸಹ ಸಮಭಾಗ ಮಾಡಿ ದಿಃ27.04.1985 ರಲ್ಲಿ ಮರುಮಂಜೂರಾತಿ ಮಾಡಿ ಆದೇಶ ಹೊರಡಿಸಿದ್ದಾರೆ ಎಂದರೆ ಗೊತ್ತಿಲ್ಲ. ನನಗೆಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ನಮಗೂ ಸಹ ಭಾಗ ಬರಬೇಕು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಅಲ್ಲ ಅವುಗಳು ಸರ್ಕಾರದಿಂದ ಮರುಮಂಜೂರಾತಿ ಆದ ಸ್ವತ್ತುಗಳು ಎಂದರೆ ಸರಿಯಲ್ಲ.

5) ನಮ್ಮ ತಾತನ ಹೆಸರು ಎಂದೂ ಕೂಡ ಮುದ್ದಯ್ಯ ಅಲ್ಲ ಎಂದರೆ ಸರಿ. ಪ್ರಸ್ತುತದ ದಾವೆ ದಾಖಲು ಮಾಡುವ ಸಂದರ್ಭದಲ್ಲಿ 1 ನೇ ಪ್ರತಿವಾದಿಯ ತಂದೆಯ ಹೆಸರು ಮುದ್ದಯ್ಯ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಅವರ ತಂದೆ ಹೆಸರು ಹನುಮಯ್ಯ

ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ತಂದೆಯ ಹೆಸರು ಸಿದ್ದಯ್ಯ ಎಂದು ಎಲ್ಲೂ ಸಹಾ ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯತ್ತಾರೆ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಭಾಧ್ಯತೆಗಳು ಇಲ್ಲ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ